ಸ್ಪಷ್ಟವಾಗಿ ಹೇಳುತ್ತಿದ್ದೇನೆ. ದಯವಿಟ್ಟು ತಪ್ಪು ಅಭಿಪ್ರಾಯವನ್ನು ಸದನಕ್ಕೆ ಕೊಡಬೇಡಿ.

ಶ್ರೀಮತಿ ಬಿ.ಟಿ.ಲಲಿತಾನಾಯಕ್:- ಹೌದು, ನಾನು ಅಲ್ಲಿ ಸಂಬಂಧಪಟ್ಟವರ ಹತ್ತಿರ ಮಾತನಾಡಿ ಬಂದಿದ್ದೇನೆ. ಅಲ್ಲಿ ಆ ತರಹ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ಬಟ್ಟೆ ತೆಗೆದು ದರ್ಶನ ತೆಗೆದುಕೊಳ್ಳುವ ಬಗ್ಗೆ ಕುವೆಂಪುರವರ ಒಂದು ಪದ್ಯವನ್ನು ಉದಾಹರಿಸಬಹುದು. ''ನಿನ್ನೆಡೆಗೆ ಬರುವಾಗ ಸಿಂಗಾರದ ಉಡಿ ಏಕೆ? ಎಂದು ಹೇಳಿದಂತೆ ಈ ರೀತಿಯಲ್ಲಿ ಅಂತಸ್ತು, ಸಿಂಗಾರ ಬೇಡ, ಬರೀ ಭಕ್ತನಾಗಿ ಬಂದರೆ ಸಾಕು ಎಂದು ಇರಬಹುದೆ? ಎಂದು ನನ್ನ ಅಭಿಪ್ರಾಯ.

ಅಧ್ಯಕ್ಷರು:- ಹಾಗೇನೂ ಇಲ್ಲ. ಶ್ರೀಮತಿ ಲಲಿತಾ ನಾಯಕ್‌ರವರು ಹೇಳಿದ್ದುದು ಸತ್ಯ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ತಿರುಪತಿಯಲ್ಲಿ ಕೆಳಗಡೆ ಇರುವ ನಮ್ಮ ಛತ್ರವನ್ನು ಮಾರಾಟ ಮಾಡಬೇಕೆಂದು ಮಾಡಿದ್ದೀರೋ? ಅಥವಾ ಎಕ್ಸಿಕ್ಯುಟಿವ್ ಆಫೀಸರ್‌ನ್ನು ಹಿಡಿದು ನಮಗೆ ಹತ್ತು ವರ್ಷಗಳಿಂದ ಅಲ್ಲಿ ಕಟ್ಟಡ ಕಟ್ಟಲು ಪರ್ಮಿಶನ್ ಕೊಟ್ಟಿಲ್ಲವಲ್ಲ ಅದರ ಬಗ್ಗೆ ಏನಾದರೂ ಪ್ರಯತ್ನ ನಡೆಸಿ, ಈಗಿರತಕ್ಕಂಥ ಮಂತ್ರಿಗಳನ್ನು ಹಿಡಿದು ಅಲ್ಲಿ ಕಟ್ಟಡ ಕಟ್ಟಿಸಿ ಯಾತ್ರಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತೀರೋ? ಅಲ್ಲಿಗೆ ವಜ್ರವೈಡೂರ್ಯಗಳನ್ನು ಎಷ್ಟು ಕೊಟ್ಟಿದ್ದಾರೆ, ಅದರ ಬೆಲೆ ಎಷ್ಟು ಎಂಬುದನ್ನು ಈ ಸಭೆಗೆ ತಿಳಿಸುತ್ತೀರೋ?

ಶ್ರೀ ಮುನಿಯಪ್ಪ ಮುದ್ದಪ್ಪ:- ಮಾನ್ಯ ಅಧ್ಯಕ್ಷರೇ, ತಿರುಪತಿಯಲ್ಲಿರುವ ನಮ್ಮ ಹಳೆಯ ಛತ್ರವನ್ನು ಮಾರಾಟ ಮಾಡುವ ಪ್ರಸ್ತಾವನೆಯೇ ಇಲ್ಲ. ಕೆಳಗಡೆಯ ಛತ್ರವನ್ನು ಕಟ್ಟಲು ಗುತ್ತಿಗೆ ನೀಡುವ ಉದ್ದೇಶವನ್ನು ಕೂಡ ಮಾಡಲಾಗಿದೆ. ಅಲ್ಲಿನ ಚಿನ್ನದ ಛತ್ರಿ 401 ತೊಲೆ ತೂಕದ್ದು ಇದೆ. ಹಿಂದೆ ಮಹಾರಾಜರು ಕೊಟ್ಟಂಥ ಪ್ಲಾಟಿನಂ ಕೂಡ ಇದೆ. 517 ತೊಲೆ ಬೆಳ್ಳಿ ಇದೆ. ಈ ವಿಚಾರಗಳನ್ನು ತಮ್ಮ ಮೂಲಕ ಸದಸ್ಯರ ಗಮನಕ್ಕೆ ತರಲಿಚ್ಛಿಸುತ್ತೇನೆ.

ವಿಷಯ:- ಗ್ರಾಮೀಣ ಪ್ರದೇಶಗಳಿಗೆ ಬಸ್ ಸಂಚಾರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 152 (1254)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕುಣಿಗಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗ್ರಾಮೀಣ ಪ್ರದೇಶಗಳಿಗೆ ಬಸ್ ಸಂಚಾರವಿಲ್ಲದೆ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದರ ಪರಿಹಾರಕ್ಕೆ ಕೈಗೊಳ್ಳುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂದ್ಯಾ (ಸಾರಿಗೆ ಸಚಿವರು):-

ಅ) ಇಲ್ಲಾ. ಕುಣಿಗಲ್ ತಾಲ್ಲೂಕು ರಾಷ್ಟ್ರೀಕೃತ ವಲಯದಲ್ಲಿದ್ದರೂ ಸಹ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆ ವತಿಯಿಂದ ಅಲ್ಲಿನ ವಲಯದ ಸಾರ್ವಜನಿಕರ ಅನುಕೂಲಕ್ಕಾಗಿ 24 ಬಸ್ಸುಗಳಿಂದ 114 ಸುತ್ತುವಳಿಗಳನ್ನು ಆಚರಣೆ ಮಾಡಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಸಭಾಧ್ಯಕ್ಷರೇ, ಕುಣಿಗಲ್ ವಿಧಾನಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಗ್ರಾಮೀಣ ಪ್ರದೇಶಗಳಿಗೆ ಬಸ್ ಸಂಚಾರವಿಲ್ಲದ್ದು, ಅದರಿಂದಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಉತ್ತರಿಸಿದ್ದಾರೆ. ಹಾಗೆಯೇ ಈಗಾಗಲೇ 24 ಬಸ್‌ಗಳನ್ನು ಓಡಾಡಿಸುತ್ತಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಇಲ್ಲ ಎಂದು ಹೇಳಿದರೆ ನಿಮ್ಮ ಸಾರಿಗೆ ಸಂಸ್ಥೆಯು ಜನರಿಂದ ಹತ್ತಿರವಾಗಿದೆಯೋ ಅಥವಾ ದೂರವಾಗಿದೆಯೋ ಎಂಬುದನ್ನು ಹೇಳಬೇಕು. ನೀವು ಓಡಿಸತಕ್ಕಂಥ 24 ಬಸ್‌ಗಳು ಏನಿವೆ ಅದು ಸಾಕಾಗುತ್ತದೆಯೇ? ಕುಣಿಗಲ್ ಬೆಂಗಳೂರಿಗೆ ಹತ್ತಿರವಾಗಿರತಕ್ಕಂಥಾದ್ದು ಇದ್ದು ತುಮಕೂರಿಗೆ ಹತ್ತಿರವಾಗಿರತಕ್ಕಂಥ ಸಂದರ್ಭದಲ್ಲಿ ಅಲ್ಲಿ ಜನರ ಓಡಾಟ ಜಾಸ್ತಿ ಇರುವ ಸಂದರ್ಭದಲ್ಲಿ ನೀವು ಕೊಟ್ಟಿರತಕ್ಕಂಥ 24 ಬಸ್‌ಗಳು ಏನೇನೂ ಸಾಲದು. ಇದರಲ್ಲಿ ಎಷ್ಟು ಷೆಡ್ಯೂಲ್ ಆಪರೇಟ್ ಆಗುತ್ತವೆ ಎನ್ನುವ ಮಾಹಿತಿ ನಿಮ್ಮ ಹತ್ತಿರ ಇಲ್ಲದೇ ಇರಬಹುದು. ನಾನು ಖಂಡಿತವಾಗಿ ಹೇಳುತ್ತೇನೆ. ಯಾವತ್ತೂ ಕೂಡ ಐದಾರು ಶೆಡ್ಯೂಲ್‌ಗಳು ಡ್ರಾಪ್ ಆಗುವ ಸಂದರ್ಭ ಇರುವುದರಿಂದ ಜನ ಕಾದು ಕಾದು ಮನೆಗೆ ಹೋಗುವ ಪರಿಸ್ಥಿತಿ ಇರುವುದರಿಂದ ಈ ತೊಂದರೆಯಾಗಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ದಯಮಾಡಿ ಉತ್ತರ ಹೇಳಿ.

+ಶ್ರೀ ಪಿ.ಜಿ.ಆರ್.ಸಿಂಧ್ಯ:- 27 ಬಸ್‌ಗಳಿಂದ 21 ಸೂಚಿಗಳನ್ನು ಓಡಿಸುತ್ತಿರುವುದು ಸಧ್ಯದಲ್ಲಿ ನಿಜಾಂಶ. ಕುಣಿಗಲ್ ತಾಲೂಕಿನಲ್ಲಿ ಸುಮಾರು 314 ಹಳ್ಳಿಗಳಿದ್ದು 192 ಹಳ್ಳಿಗಳಿಗೆ ಮಾತ್ರ ಸಾರಿಗೆ ಸಂಸ್ಥೆ ಬಸ್‌ಗಳು ಹೋಗುತ್ತಿವೆ. ಮುಖ್ಯವಾದ ರಾಷ್ಟ್ರೀಯ ಹೆದ್ದಾರಿ ಬಿಟ್ಟರೆ ಪಕ್ಕದಲ್ಲಿರುವ ಯಾವ ಹಳ್ಳಿ ರಸ್ತೆಗಳೂ ಸಹಿತ ಸಂಪೂರ್ಣವಾಗಿ ರಾಷ್ಟ್ರೀಕರಣ ಆಗಿಲ್ಲ. ಸಧ್ಯದಲ್ಲಿ ಸರ್ಕಾರ ರಾಷ್ಟ್ರೀಕರಣ ಮಾಡುವ ಸ್ಥಿತಿಯಲ್ಲೂ ಇಲ್ಲ. ಅದರಿಂದಾಗಿ ಕುಣಿಗಲ್ ತಾಲೂಕಷ್ಟೆ ಅಲ್ಲ, ರಾಜ್ಯದ ಬಹುತೇಕ ತಾಲೂಕುಗಳಲ್ಲೂ ಜನಸಂದಣಿ ಹೆಚ್ಚಾಗಿದೆ. ಈಗಿರುವ ಗ್ರಾಮೀಣ ಸಾರಿಗೆ ವ್ಯವಸ್ಥೆ ಸಮರ್ಪಕವಾಗಿಲ್ಲ, ಸಾಕಷ್ಟಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ. ಕುಣಿಗಲ್‌ನಲ್ಲೆ ಒಂದು ಘಟಕ ಇರುವುದರಿಂದ ಅವರ ಸಲಹೆಗಳನ್ನು ತೆಗೆದುಕೊಂಡು ಸಾರಿಗೆ ಬಸ್‌ಗಳನ್ನು ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಎಲ್ಲಿ ಸಾರಿಗೆ ಸಂಸ್ಥೆಯ ಬಸ್‌ಗಳನ್ನು

ಓಡಿಸಲಾಗುವುದಿಲ್ಲ ಅಲ್ಲಿ ಜಿಲ್ಲಾಧಿಕಾರಿ ಮತ್ತು ಆರ್‌ಟಿಒ ಮೂಲಕ ಇತರೆ ಬಸ್‌ಗಳನ್ನು ಓಡಿಸಲಿಕ್ಕೆ ಎರಡು ತಿಂಗಳಲ್ಲಿ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೇ, ನನ್ನ ರಕ್ಷಣೆಗೆ ನೀವು ಬರಬೇಕಾಗುತ್ತದೆ. ಈಗ ರಾಷ್ಟ್ರೀಕೃತವಾಗಿರುವ ತಾಲ್ಲೂಕುಗಳಲ್ಲಿ ನಿಮ್ಮ ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತವಾಗಿದೆ. ಅಲ್ಲೂ ಕೂಡ ಸಮರ್ಪಕವಾಗಿ ಬಸ್‌ಗಳನ್ನು ಓಡಿಸಲು ಆಗುತ್ತಿಲ್ಲ. ಇನ್ನು ರಾಷ್ಟ್ರೀಕೃತವಲ್ಲದ ಕಡೆ ಖಾಸಗಿಯವರು ಬಸ್‌ಗಳನ್ನು ಓಡಿಸುತ್ತಿಲ್ಲ. ನೀವೂ ಓಡಿಸುವ ಪ್ರಯತ್ನ ಮಾಡುವುದಿಲ್ಲ. ಒಟ್ಟಿನಲ್ಲಿ ನಿಮ್ಮ ನೀತಿಯಿಂದಾಗಿ ಗ್ರಾಮೀಣ ಜನರನ್ನು ಸಾರಿಗೆ ವ್ಯವಸ್ಥೆಯಿಂದ ದೂರ ಇಡುವಂತಹ ಸಂಚು ಆಗುತ್ತಿದೆ. ನಿಮ್ಮ ನೀತಿ ಏನೆಂದು ನನಗೆ ಅರ್ಥವಾಗುತ್ತಿಲ್ಲ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಯಾವುದೇ ವಲಯದಲ್ಲೂ ಬಸ್‌ಗಳನ್ನು ಓಡಿಸಲು ಆಗಿಲ್ಲ, ಬಹಳ ದಕ್ಷರಾಗಿರುವ ತಾವು ಅಲ್ಲಿ ಕುಳಿತಿರುವ ಸಂದರ್ಭದಲ್ಲಿ ವಿಶೇಷವಾಗಿ ಗ್ರಾಮೀಣ ಜನರಿಗೆ ಯಾವ ಸಾರಿಗೆ ನೀತಿ ಅನುಸರಿಸುತ್ತೀರಿ? ಈಗ ಏನಾಗುತ್ತಿದೆ ಅಂದರೆ, ಯಾವುದೇ ಬಸ್‌ನಲ್ಲಿ ನೋಡಿ ಟಾಪ್‌ಮೇಲೆ ಕುಳಿತು ಹೋಗುವುದು, ನಾವು ಸುಲಭವಾಗಿ ಹೇಳಿಬಿಡಬಹುದು ಚಾರ್ಜ್ ಕೊಡದವರು ಟಾಪ್‌ಮೇಲೆ ಹೋಗುತ್ತಾರೆ ಎಂದು. ಅದು ಸರಿಯಲ್ಲ, ಒಳಗೆಷ್ಟು ಜನ ಇರುತ್ತಾರೋ ಅದಕ್ಕಿಂತ ಹೆಚ್ಚು ಜನ ಹೊರಗೆ ಕುಳಿತಿರುವ ದೃಶ್ಯ ಎಲ್ಲಾ ತಾಲೂಕುಗಳಲ್ಲಿ ಕಾಣುತ್ತಿರುವುದರಿಂದ ಸ್ಪಷ್ಟವಾದ ಉತ್ತರ ತಮ್ಮಿಂದ ನನಗೆ ಬೇಕಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ನಾನು ಸ್ಪಷ್ಟ ಉತ್ತರ ಕೊಟ್ಟಿದ್ದೇನೆ. ಸಾರಿಗೆ ಇಲಾಖೆ ನೀತಿ ಬಗ್ಗೆ ಉತ್ತರ ಕೊಡಲಿಕ್ಕೆ ಈ ಪ್ರಶ್ನೋತ್ತರ ಸಂದರ್ಭದಲ್ಲಿ ಸಾಧ್ಯವಿಲ್ಲ ನನ್ನ ಇಲಾಖೆ ಬೇಡಿಕೆ ಮೇಲೆ ಉತ್ತರ ಕೊಡುವಾಗ ಹೇಳುತ್ತೇನೆ. ಗ್ರಾಮೀಣ ಸಾರಿಗೆಗೆ ಹೆಚ್ಚು ಮಹತ್ವ ಕೊಡುವ ದೃಷ್ಟಿಯಿಂದ ನಾನು ವಿಚಾರ ಮಾಡುತ್ತೇನೆ. ಟಿಕೆಟ್‌ಲೆಸ್ ಪ್ರಯಾಣಿಕರು ಟಾಪ್ ಮೇಲೆ ಪ್ರಯಾಣ ಮಾಡುತ್ತಾರೆಂದು ನಾನು ಎಲ್ಲೂ ಹೇಳಿಲ್ಲ, ಒಳಗಡೆ ಜಾಗವಿಲ್ಲವೆಂದು ಪ್ರಯಾಣಿಕರ ಹಿಂಸೆಯಿಂದ ಮೇಲುಗಡೆ ಹೋಗಿ ಕುಳಿತುಕೊಳ್ಳುತ್ತಾರೆ, ಅವರು ಹೇಳಿರುವುದು ಸತ್ಯ ಇದೆ. ಪರಿಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನ ಮಾಡುತ್ತೇನೆ.

ವಿಷಯ:- ಪಣಂಬೂರಿನ ಎ.ಪಿ.ಎಂ.ಸಿ. ಕಟ್ಟಡ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 153 (946)

ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್ಕರಲ್):- ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಪಣಂಬೂರಿನಲ್ಲಿರುವ ಎ.ಪಿ.ಎಂ.ಸಿ. ಯಾರ್ಡ್ ಕಟ್ಟಡದ ನಿರ್ಮಾಣ ಕಾರ್ಯವು ಪೂರ್ಣಗೊಂಡಿದೆಯೇ?